# ಬುದ್ಧ ಬೇಸಾಯ

ಬುದ್ಧನ ಜೀವನ ಪಾರದರ್ಶಕವಾದದ್ದು. ಆತನ ಶಿಷ್ಯರು, ಅಭಿಮಾನಿಗಳ ಸಂಖ್ಯೆ ಅಪಾರ. ಬುದ್ಧನ ವ್ಯಕ್ತಿತ್ವವೇ ವಿಶಿಷ್ಟವಾದದ್ದು. ತನ್ನ ಎದುರಿನ ಎದುರಾಳಿಯನ್ನೂ ತನ್ನ ಪ್ರಶಾಂತ, ತಿಳಿವಳಿಕೆಯ ಮಾತುಗಳಿಂದಲೇ ಮಣಿಸಬಲ್ಲವನಾಗಿದ್ದ. ತನಲ್ಲಿ ಅನುಮಾನ, ಅಪನಂಬಿಕೆ ಇರುವವರನ್ನೂ ತನ್ನ ವ್ಯಕ್ತಿತ್ವದಿಂದ ಸೆಳೆಯಬಲ್ಲವನಾಗಿದ್ದ. ಎಲ್ಲ ದೈವ, ಧರ್ಮಗಳಿಂದಾಚೆ ವಾಸ್ತವಿಕ ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ಹೇಳಬಲ್ಲವನಾಗಿದ್ದ. ತನ್ನನ್ನು ಪರೀಕ್ಷಿಸಲೆಂದೇ ಬಂದವರನ್ನು ಸಹ ತನ್ನ ಸರಳ ಆಚಾರ– ವಿಚಾರಗಳಿಂದಲೇ ಗೆಲ್ಲಬಲ್ಲವನಾಗಿದ್ದ.

ಬುದ್ಧನನ್ನು ಪ್ರೀತಿಸುವವರಂತೆ ಅವನ ವಿಚಾರಗಳನ್ನು ಅನುಮಾನದಿಂದ ನೋಡುವವರು ಅವನ ಆಸುಪಾಸಿನಲ್ಲಿದ್ದರು. ಆ ಜನರೆಲ್ಲರೂ ಬುದ್ಧನ ಬಳಿ ಕುಳಿತು ಪ್ರಶ್ನಿಸುವುದರ ಮೂಲಕ ತಮ್ಮ ಸಮಸ್ಯೆಗಳಿಗೆ ಉತ್ತರ ಕಂಡುಕೊಂಡಿದ್ದರು. ಪ್ರಶ್ನಿಸುವುದರ ಬಗ್ಗೆ, ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದರ ಬಗ್ಗೆ ಬುದ್ಧನಿಗೆ ಗೌರವವಿತ್ತು. ಮನುಷ್ಯರ ಸಹಜ ಜೀವನದಲ್ಲಿ ಎದುರಾಗುವ ಸಾವು, ನೋವು, ಮುಪ್ಪುಗಳಿಗೆ ಉತ್ತರ ಹುಡುಕಲೆಂದು ಹೊರಟು ತನಗೆ ಎದುರಾದ ಋಷಿಗಳು, ಸಂತರು, ಸಾಧುಗಳ ಜೊತೆ ಚರ್ಚಿಸಿದ, ತರ್ಕಿಸಿದ ಪರಿಣಾಮವೆಂದರೆ ಅಸ್ತಿತ್ವವಿಲ್ಲದ ವೇದ, ಶಾಸ್ತ್ರಗಳು, ದೈವದ ಕಲ್ಪನೆಗಳು, ಆಚರಣೆಗಳು ಜನರನ್ನು ಕಾಡುವ ಪಿಡುಗುಗಳಾಗಿರುವುದನ್ನು ಅರಿತ. ಬದುಕಿನ ಅವಧಿಯಲ್ಲಿ ಅವನನ್ನು ಪರೀಕ್ಷಿಸ ಬಂದವರು ಅವನ ಅನುಯಾಯಿಗಳಾಗಿದ್ದು, ಶತ್ರುಗಳಾಗಲೆಂದು ಬಂದವರು ಶಿಷ್ಯರಾಗಿದ್ದು ವಿಸ್ಮಯದ ಸಂಗತಿಗಳಾಗಿವೆ.

ಒಮ್ಮೆ ಬುದ್ಧ ವೈಶಾಲಿಯಲ್ಲಿದ್ದಾಗ ಲಿಚ್ಛವೀ ಪಂಗಡದ ಭದ್ದಿಮನು ಅವನನ್ನು ನೋಡಲೆಂದು ಬಂದ. ಬುದ್ಧನ ಕುರಿತು ಇರುವ 'ಮಾಯ, ಮಂತ್ರಗಾರ ಮತ್ತು ಮಾಯಾ ಜಾಲ ಬೀರುವ ಕೈಚಳಕವನ್ನು ಬಲ್ಲವನು. ಈ ಕೈಚಳಕದಿಂದ ಇತರೆ ಜನಾಂಗದಲ್ಲಿರುವವರನ್ನು ಮರುಳು ಮಾಡಿ ತನ್ನ ಅನುಯಾಯಿಗಳನ್ನಾಗಿ ಮಾಡಿಕೊಳ್ಳುತ್ತಾನೆ' ಎಂಬ ಅಪಾದನೆಯ ಬಗ್ಗೆ ಪ್ರಶ್ನಿಸುತ್ತಾನೆ. ಬುದ್ಧ ಹೇಳುತ್ತಾನೆ 'ಯಾವುದೇ ವಿಚಾರಗಳು ಗ್ರಂಥದಲ್ಲಿದೆ ಎಂದು, ತತ್ವಶಾಸ್ತ್ರ– ನ್ಯಾಯತತ್ವ ತೀರ್ಮಾನಗಳಲ್ಲಿದೆ ಎಂದು ಒಪ್ಪಬೇಡಿ. ಒಬ್ಬ ಸನ್ಯಾಸಿಯನ್ನು ಗೌರವಿಸಬೇಕೆಂದು ಅವನ ವಿಚಾರವನ್ನು ಸುಮ್ಮನೆ ಒಪ್ಪಿಕೊಳ್ಳಬೇಡಿ. ಮಹತ್ವದ ಆಕಾಂಕ್ಷೆಯುಳ್ಳವ ಮನೋಶಕ್ತಿಯನ್ನು ನಿಗ್ರಹಿಸುವುದಲ್ಲದೆ, ಸುಳ್ಳು ಹೇಳುವುದನ್ನು, ತನ್ನ ದುರಾಸೆಗಳನ್ನು ನಿಗ್ರಹಿಸಿಕೊಳ್ಳಬೇಕು. ಮಹತ್ವದ ಆಕಾಂಕ್ಷೆಗಳು ವಿವೇಚನೆಯಿಲ್ಲದ ದಾರಿಯಲ್ಲಿ ನಡೆಯುತ್ತವೆ. ನಾನು ಹೇಳುತ್ತೇನೆ ದುರಾಸೆಯನ್ನು ಹುಟ್ಟು ಹಾಕುವ ಆಲೋಚನೆಗಳಿಂದ, ಶಾರೀರಿಕ ಶ್ರಮಗಳಿಂದ, ಅಜ್ಞಾನದಿಂದ ದೂರವಿಡಬಲ್ಲ ತಾಣಗಳಲ್ಲಿ ವಾಸಿಸಿ ಎಂದು. ಇತರ ಮತ ಧರ್ಮಗಳು ಸುಳ್ಳನ್ನು ಹೇಳುವುದಲ್ಲದೆ, ಶೂನ್ಯದಿಂದಲೇ ಸುಳ್ಳನು ಸೃಷ್ಟಿಸುತ್ತವೆ. ಹೀಗಾಗಿಯೇ ಇಂತಹವರ ದೃಷ್ಟಿಯಲ್ಲಿ ತಾನೊಬ್ಬ ಸುಳ್ಳುಗಾರ, ಶೂನ್ಯದಿಂದ ಸುಳ್ಳು ಸೃಷ್ಟಿಸಬಲ್ಲ ಮಾಟಗಾರನಾಗಿ ಕಂಡು ಬರುತ್ತೇನೆ'.

ಬುದ್ಧನ ಬಗ್ಗೆ ಇನ್ನೊಂದು ಅಪಾದನೆ ಎಂದರೆ ಅವನು ಪರತಂತ್ರ ಜೀವಿ. ತನ್ನ ಜೀವನಕ್ಕಾಗಿ ಶ್ರಮ ಪಡದೆ ಇತರರ ಸಂಪಾದನೆಯಿಂದ ಜೀವಿಸುವವನು ಎಂದು. ಬುದ್ಧ ಒಂದು ದಿನ 'ಏಕನಳ' ಎಂಬುವಲ್ಲಿ ಮಗಧ ಜನರೊಡನೆ ನೆಲೆಸಿದ್ದಾಗ ಭಿಕ್ಷಾಪಾತ್ರೆ ಹಿಡಿದು ಭಿಕ್ಷೆಗಾಗಿ ಹೋಗುತ್ತಾನೆ. ಬ್ರಾಹ್ಮಣನಾದ ಕಾಶಿಭರ ದ್ವಜನು ಐದುನೂರು ಉಳಿಮೆಕಾರರೊಂದಿಗೆ ಬಿತ್ತನೆ ಮಾಡುವ ಕಾಲದಲ್ಲಿ, ಜಾಗದಲ್ಲಿ ಬುದ್ಧ ಭಿಕ್ಷಾಪಾತ್ರೆಯೊಂದಿಗೆ ಪ್ರತ್ಯಕ್ಷನಾಗುತ್ತಾನೆ. ಬುದ್ಧನನ್ನು ಕುರಿತು ಆ ಬ್ರಾಹ್ಮಣ ನಾನು ಊಟ ಮಾಡುವ ಮೊದಲು ಉತ್ತು ಬಿತ್ತಿದ್ದೇನೆ. ನೀನು ಸಹ ನನ್ನ ಹಾಗೆಯೇ ಊಟಕ್ಕಿಂತ ಮೊದಲು ಉತ್ತು ಬಿತ್ತಬೇಕು ಎನ್ನುತ್ತಾನೆ. ಬುದ್ಧ ನಾನೂ ದಿನ ನಿತ್ಯ ಊಟಕ್ಕೆ ಮೊದಲು ಉಳುತ್ತೇನೆ ಹಾಗೂ ಬಿತ್ತುತ್ತೇನೆ ಎಂದು ನುಡಿಯುತ್ತಾನೆ. ಉಳಿಮೆ ಮಾಡದಿದ್ದರೂ ಉಳುವೆನೆಂಬ, ಬಿತ್ತದಿದ್ದರೂ ಬಿತ್ತುವೆನೆಂಬ, ನೊಗ ಹೊರದಿದ್ದರೂ ಹೊತ್ತೆನೆಂಬ ಬುದ್ಧನ ಮಾತು ಅವನಿಗೆ ಆಶ್ಚರ್ಯ ಉಂಟು ಮಾಡುತ್ತದೆ.

ನಂಬಿಕೆಯೇ ನಾನು ಬಿತ್ತುವ ಬೀಜ, ತಪಸ್ಸೇ ಮಳೆ, ಬುದ್ಧಿವಂತಿಕೆಯೇ ನೊಗ ಮತ್ತು ಉಳುಮೆ. ಉತ್ತಮ ಧ್ಯೇಯ ಮತ್ತು ತಪ್ಪುಗಳನ್ನು ಮಾಡದ ಆಲೋಚನೆಯೇ ನೊಗ ಎಳೆಯುತ್ತದೆ. ಪರಿಪೂರ್ಣವಾದ ಮನಸ್ಸು ಉಳುತ್ತದೆ ಮತ್ತು ಮಣ್ಣನ್ನು ಹರಡುತ್ತದೆ ಎಂದು ಬುದ್ಧ ತನ್ನ ಬೇಸಾಯದ ಪರಿಯನ್ನು ವಿವರಿಸುತ್ತಾನೆ. ಮುಂದುವರಿದು ಮಾತು ಮತ್ತು ಕೆಲಸಗಳಲ್ಲಿ ಸದಾ ಎಚ್ಚರಿಕೆಯಿಡುತ್ತಾನೆ. ಆಹಾರ ಸೇವನೆಯಲ್ಲಿ ತರತಮ ಭಾವವಿಲ್ಲ. ನನ್ನ ಬೆಳೆಯಲ್ಲಿನ ಕಸವನ್ನು ಕುರಿತು ಎಚ್ಚರಿಕೆ ವಹಿಸುತ್ತೇನೆ. ಉತ್ತಮವಾದ ಅಂತಿಮ ಆನಂದವೆಂಬ ಫಸಲು ದೊರೆತ ನಂತರ ನಾನು ವಿಶ್ರಾಂತಿ ಪಡೆಯುತ್ತೇನೆ. ನನ್ನನ್ನು ಪ್ರಮುಖ ಧ್ಯೇಯಗಳೆಡೆಗೆ ಕೊಂಡೊಯ್ಯುವ, ಶಾಂತಿಯೆಡೆಗೆ ನಡೆಸುವ, ಕೋಪಾಗ್ನಿಯನ್ನು ನಂದಿಸುವ ಪ್ರಯತ್ನಗಳೇ ನನ್ನ ಎತ್ತುಗಳು. ಹೀಗೆ ಸಾವಿಲ್ಲದ, ಕೇಡಿಲ್ಲದ ನೋವಿಲ್ಲದ ನಿರಂತರ ವ್ಯವಸಾಯ ನನ್ನದು. ಎಲ್ಲಾ ಕಪಟ, ಮೋಸ, ಸ್ವಾರ್ಥಗಳ ತೊರೆದ ವ್ಯವಸಾಯ ನನ್ನದು ಎಂದು ಬುದ್ಧ ವಿನಂತಿಸಿಕೊಳ್ಳುತ್ತಾನೆ. ಹೀಗೆ ಮೌಲ್ಯ, ಉಪದೇಶಗಳನ್ನು ತನ್ನನ್ನು ನಂಬಿದವರಿಗಾಗಿ ಸನ್ಯಾಸಿಯೊಬ್ಬ ಬಿತ್ತಲೇಬೇಕಾದ ಜೊತೆಗೆ ತಾನೂ ಪರಿಪೂರ್ಣನಾಗಿರಬೇಕಾದ ಯೋಗ್ಯತೆಯನ್ನು ಕುರಿತು ವಿಮರ್ಶಿಸುತ್ತಾನೆ.

ಹೀಗೆ ವ್ಯವಸಾಯವೆಂಬುದು ಕಾಯಕ ಮತ್ತು ದಾಸೋಹ ಎಂಬುದಾಗಿ ಶರಣರಲ್ಲಿ ವಿವರಿಸಲ್ಪಟ್ಟಿದೆ. ಭೂಮಿ ಎಂಬುದು ಅಕ್ಷಯ ಪಾತ್ರೆ, ನಿರಂತರವಾಗಿ ಉತ್ಪಾದಿಸುವ ಸಾಮರ್ಥ್ಯ ಉಳ್ಳದ್ದು. ಬಳಸುವ ಬಿತ್ತದ ಬೀಜಗಳು ಉತ್ತಮವಾಗಿರಬೇಕು ಅಷ್ಟೇ. ಮಟ್ಟಗುಣಕ್ಕೆ ಅನುಗುಣವಾಗಿ ಅವು ಕಣ್ತೆರೆದು ಮೊಳಕೆ, ಸಸಿ, ಗಿಡ ಮರವಾಗುತ್ತವೆ. ಏಸು ಕೂಡ ತನ್ನ ಪ್ರಸಿದ್ಧವಾದ ಸಾಮಿತಿ 'ಬಿತ್ತುವವನ ಕಥೆ'ಯಲ್ಲಿಯೂ ಇದನ್ನೇ ಹೇಳಿದ. ಹೀಗೆ ಜಗತ್ತಿಗೆ ಜಗತ್ತಿನ ಒಳಿತಿಗೆ ಮಹಾತ್ಮರು ನಿರಂತರವಾದ ಕೃಷಿಯನ್ನು ನಡೆಸುತ್ತಾರೆ. ಆತ್ಮವಿಶ್ವಾಸ, ನಂಬಿಕೆಯಿಂದ ಪಡೆದ ಫಸಲಿನ ಹಕ್ಕಿಗಾಗಿ ಆಸೆ ಪಡದೆ ಸಾಮಾನ್ಯರ ಬದುಕಿಗಾಗಿ ಅದನ್ನು ಅರ್ಪಿಸುತ್ತಾರೆ. ಪ್ರಾಣದ ಹಂಗನ್ನು ತೊರೆದು ಪ್ರಯತ್ನಗಳಲ್ಲಿ ವಿಶ್ವಾಸವಿಟ್ಟು ಮನುಕುಲದ ಒಳತಿಗಾಗಿ ಮಹಾತ್ಮನೆನಿಸಿಕೊಳ್ಳುತ್ತಾನೆ.

■ **ಅಮೃತಮತಿ**

## ಮಾತೇ ಮುತ್ತು

- ವಿದ್ಯಾವಂತ ಮೂಢ ನಂಬಿಕಸ್ತ ಅವಿದ್ಯಾವಂತ ಮೂಢ ನಂಬಿಕಸ್ತನಿಗಿಂತ ಅಪಾಯಕಾರಿ.
  —ಎಚ್. ನರಸಿಂಹಯ್ಯ
- ಸನ್ಮಾನ, ಬಿರುದುಗಳು ಅಸಾಮಾನ್ಯರಿಗೆ ಮುಜುಗರ ಉಂಟು ಮಾಡುತ್ತವೆ. ಅನರ್ಹರಿಂದ ಗೌರವ ಕಳೆದುಕೊಳ್ಳುತ್ತವೆ.
  —ಜಾರ್ಜ್ ಬರ್ನಾಡ್ ಷಾ
- ದುಡಿಮೆಯು ಅತ್ಯಂತ ಹೆಚ್ಚು ಬೆಲೆ ಬಾಳುವ ಬಂಡವಾಳ.
  —ಕಾರ್ಲ್ ಮಾರ್ಕ್ಸ್
- ಜೀವನದ ನಿಯಮವೆಂದರೆ ಆತ್ಮವಿಶ್ವಾಸ ಹಾಗೂ ಸಂಯಮ. ಇದಿಲ್ಲದೆ ಪೂರ್ಣತೆಯನ್ನು ಪಡೆಯಲಾಗುವುದಿಲ್ಲ.
  —ಗಾಂಧೀಜಿ
- ಕನ್ನಡ ನಾಡಿಗೆ ಕನ್ನಡವೇ ಗತಿ. ಸಂಸ್ಕೃತವಲ್ಲ, ಇಂಗ್ಲಿಷ್ ಅಲ್ಲ, ಹಿಂದಿಯೂ ಅಲ್ಲ.
  —ಬಿ.ಎಂ. ಶ್ರೀಕಂಠಯ್ಯ
- ಶರೀರದಂತೆ ಬುದ್ಧಿಗೂ ಮುಪ್ಪಿರುವುದರಿಂದ ನಿರ್ಣಾಯಕ ಸ್ಥಾನಗಳಲ್ಲಿ ಇರುವವರು ಅಜೀವಪರ್ಯಂತ ಅಧಿಕಾರದಲ್ಲಿ ಇರಬಾರದು.
  —ಅರಿಸ್ಟಾಟಲ್